IslamHouse.com 1436

# ಫಿತ್ರ್ ಝಕಾತ್

## ಮತ್ತು ಅದರ ವಿಧಿಗಳು

زكاة الفطر وأحكامها

< الكنادي >

ಶೈಖ್ ಅಬ್ದುಲ್ಲಾಹ್ ಇಬ್ನ್ ಸಾಲಿಹ್ ಅಲ್‌ಕಸೀರ್

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಅಬೂ ಬಕರ್ ನಝೀರ್ ಸಲಫಿ

# زكاة الفطر وأحكامها

الشيخ عبد الله بن صالح القصير

ترجمة: محمد حمزة البتوري

مراجعة: أبو بكر نذير السلفي

# ಫಿತ್ರ್ ಝಕಾತ್ ಎಂದರೇನು?

ರಮದಾನ್ ತಿಂಗಳ ಉಪವಾಸವನ್ನು ಫಿತ್ರ್ (ಪಾರಣೆ) ಮಾಡುವ ಕಾರಣದಿಂದ (ಕೊನೆಗೊಳಿಸುವ ಕಾರಣದಿಂದ) ನೀಡುವ ಝಕಾತ್ ಆಗಿರುವುದರಿಂದ ಇದಕ್ಕೆ 'ಝಕಾತುಲ್ ಫಿತ್ರ್' ಅಥವಾ ಫಿತ್ರ್ ಝಕಾತ್ ಎಂಬ ಹೆಸರು ಬಂದಿದೆ. ಇದನ್ನು 'ಸದಕತುಲ್ ಫಿತ್ರ್' ಎಂದೂ ಕರೆಯಲಾಗುತ್ತದೆ. ಇವೆರಡು ಹೆಸರುಗಳೂ ಹದೀಸ್‌ಗಳಲ್ಲಿ ಬಂದಿವೆ.

ಈದುಲ್ ಫಿತ್ರ್‌ನ ದಿನದಂದು ಅಲ್ಲಾಹುವಿನಿಂದ ಪುಣ್ಯವನ್ನು ನಿರೀಕ್ಷಿಸಿ ಕೊಡುವ ದಾನವಾಗಿರುವುದರಿಂದ ಇದಕ್ಕೆ 'ಸದಕತುಲ್ ಫಿತ್ರ್' ಎಂಬ ಹೆಸರು ಬಂದಿದೆ. ಒಳ್ಳೆಯ ಮನಸ್ಸಿನೊಂದಿಗೆ ಅದನ್ನು ನೀಡಬೇಕಾದ ಸಮಯದಲ್ಲಿ ಅದನ್ನು ಪಡೆಕೊಳ್ಳಲು ಅರ್ಹರಾಗಿರುವ ಜನರಿಗೆ ಅದನ್ನು ನೀಡಬೇಕಾಗಿದೆ.

ನಿಷ್ಕಳಂಕವಾಗಿ ಅಲ್ಲಾಹುವಿನ ಪ್ರೀತಿಯನ್ನು ಆಶಿಸಿ ಇದನ್ನು ಕೊಡುವ ಕಾರಣದಿಂದಲೂ ಇದಕ್ಕೆ 'ಝಕಾತುಲ್ ಫಿತ್ರ್' ಅಥವಾ ಫಿತ್ರ್ ಝಕಾತ್ ಎಂಬ ಹೆಸರು ಬಂದಿದೆ. ಯಾಕೆಂದರೆ ಇದರ ಮೂಲಕ ಆತ್ಮವು ಕಲ್ಮಶಗಳಿಂದ ಶುದ್ಧೀಕರಣಗೊಳ್ಳುತ್ತದೆ, ಕರ್ಮೋತ್ಸಾಹವು ಹೆಚ್ಚಾಗುತ್ತದೆ ಮತ್ತು ಕರ್ಮಗಳಲ್ಲಿರುವ ಕುಂದು ಕೊರತೆಗಳು ನಿವಾರಣೆಯಾಗುತ್ತದೆ.

**ಫಿತ್ರ್ ಝಕಾತನ್ನು ಧರ್ಮ ನಿಯಮವನ್ನಾಗಿ ಮಾಡಲಾದ ಕಾಲ ಮತ್ತು ಅದಕ್ಕಿರುವ ಪುರಾವೆ:**

ಹಿಜ್ರಾ ಎರಡನೇ ವರ್ಷದ ರಮದಾನ್ ತಿಂಗಳಲ್ಲಿ ಫಿತ್ರ್ ಝಕಾತನ್ನು ಕಡ್ಡಾಯಗೊಳಿಸಲಾಯಿತು. ಇದು ಧರ್ಮನಿಯಮವಾಗಿದೆ ಎಂಬುದಕ್ಕೆ ಕುರ್‌ಆನ್‌ನಲ್ಲಿರುವ ಸಾರ್ವತ್ರಿಕ ಆದೇಶ, ಸಹೀಹಾದ ಸುನ್ನತ್‌ನಲ್ಲಿ

ಸ್ಪಷ್ಟವಾದ ಆದೇಶ ಮತ್ತು ಮುಸ್ಲಿಮರ ಒಮ್ಮತಾಭಿಪ್ರಾಯವು ಪುರಾವೆಯಾಗಿದೆ.

ಅಲ್ಲಾಹು ಹೇಳುತ್ತಾನೆ:

﴿ قَدۡ أَفۡلَحَ مَن تَزَكَّىٰ ١٤ ﴾ [الأعلى: 14] .

“ತನ್ನನ್ನು ಸ್ವತಃ ಶುದ್ಧೀಕರಿಸಿದವನು ಯಶಸ್ಸನ್ನು ಗಳಿಸಿದನು.” [ಕುರ್‌ಆನ್ 87:14]

ಅಂದರೆ ದಾನಧರ್ಮ ಮಾಡುವ ಮೂಲಕ ತನ್ನ ಆತ್ಮವನ್ನು ಶುದ್ಧೀಕರಿಸಿದವನು, ಅದನ್ನು ಪೋಷಿಸಿದವನು ಮತ್ತು ನಿರ್ಮಲಗೊಳಿಸಿದವನು ಸಂಪೂರ್ಣ ಯಶಸ್ವಿಯಾದನು.

ಇದನ್ನು ವ್ಯಾಖ್ಯಾನಿಸುತ್ತಾ ಇಕ್ರಿಮಃ(ﷺ) ಹೇಳುತ್ತಾರೆ:

هُوَ الرَّجُلُ يُقَدِّمُ زَكَاتَهُ بَيْنَ يَدَيْ صَلَاتِهِ

“ಅಂದರೆ ಈದ್ ನಮಾಝ್‌ಗೆ ಮುಂಚಿತವಾಗಿ ತನ್ನ ಫಿತ್ರ್ ಝಕಾತನ್ನು ನೀಡುವ ವ್ಯಕ್ತಿ.”

ಸಲಫ್‌ಗಳಲ್ಲಿ ಅನೇಕ ಮಂದಿ ಹೇಳುವ ಪ್ರಕಾರ ಈ ಆಯತ್ತಿನಲ್ಲಿ ಉದ್ದೇಶಿಸಿರುವುದು ಫಿತ್ರ್ ಝಕಾತ್ ಆಗಿದೆ. ಇಬ್ನ್ ಖುಝೈಮಾ ಮತ್ತಿತರರು ಇದನ್ನು ಪ್ರವಾದಿ(ﷺ)ರಿಂದ ವರದಿ ಮಾಡಿದ್ದಾರೆ.

ಇಮಾಮ್ ಮಾಲಿಕ್ ಹೇಳುತ್ತಾರೆ:

هِيَ دَاخِلَةٌ فِي عُمُومِ قَوْلِهِ تَعَالَى : وَآتُوا الزَّكَاةَ

"ಝಕಾತ್ ನೀಡಿರಿ ಎಂಬ ಅಲ್ಲಾಹನ ವಚನದ ಸಾರ್ವತ್ರಿಕ ಅರ್ಥದಲ್ಲಿ ಫಿತ್ರ್ ಝಕಾತ್ ಒಳಪಡುತ್ತದೆ."

ಅಲ್‌ಬುಖಾರಿ, ಮುಸ್ಲಿಮ್ ಮತ್ತಿತರ ಹದೀಸ್ ಗ್ರಂಥಗಳಲ್ಲಿ ಹೀಗಿದೆ:

{فَرَضَ رَسُولُ اللَّهِ ﷺ زَكَاةَ الْفِطْرِ} متفق عليه.

ಪ್ರವಾದಿ(ﷺ)ರವರು ಫಿತ್ರ್ ಝಕಾತನ್ನು ಕಡ್ಡಾಯಗೊಳಿಸಿದ್ದಾರೆ." [ಅಲ್‌ಬುಖಾರಿ (1504) ಮತ್ತು ಮುಸ್ಲಿಮ್ (984) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ]

ಮುಸ್ಲಿಮರ ಪೈಕಿ ಪೂರ್ವಿಕರೂ ಇತ್ತೀಚಿನವರೂ ಇದರಲ್ಲಿ ಒಮ್ಮತಾಭಿಪ್ರಾಯ ಹೊಂದಿದ್ದಾರೆ. ಮದೀನಾ ನಿವಾಸಿಗಳು ಇದಕ್ಕಿಂತಲೂ ಉತ್ತಮವಾಗಿ ಬೇರೊಂದು ದಾನವನ್ನು ಪರಿಗಣಿಸುತ್ತಿರಲಿಲ್ಲ.

## ಫಿತ್ರ್ ಝಕಾತಿನ ವಿಧಿಗಳು

ಫಿತ್ರ್ ಝಕಾತ್ ಕಡ್ಡಾಯವಾಗಿದೆ ಎಂಬುದಕ್ಕೆ ಉಲಮಾಗಳ ಒಮ್ಮತಾಭಿಪ್ರಾಯ ಇದೆಯೆಂದು ಇಬ್ನುಲ್ ಮುಂದಿರ್ ಮತ್ತಿತರರು ಹೇಳಿದ್ದಾರೆ.

ಇಬ್ನ್ ಉಮರ್, ಇಬ್ನ್ ಅಬ್ಬಾಸ್ ಮುಂತಾದವರು ಖಚಿತವಾಗಿ ಹೇಳಿದ ಮತ್ತು ಸಹಾಬಾಗಳು ಇದನ್ನು ಕಡ್ಡಾಯವೆಂದು ಪರಿಗಣಿಸಿದ

ಪುರಾವೆಗಳು ಇದನ್ನು ಕಡ್ಡಾಯವೆಂದು ಹೇಳಲು ಧಾರಾಳ ಸಾಕು. ಇಬ್ನ್ ಉಮರ್(ﷺ) ಹೇಳುತ್ತಾರೆ:

{فَرَضَ رَسُولُ اللَّهِ ﷺ زَكَاةَ الْفِطْرِ} متفق عليه.

ಪ್ರವಾದಿ(ﷺ)ರವರು ಫಿತ್ರ್ ಝಕಾತನ್ನು ಕಡ್ಡಾಯಗೊಳಿಸಿದ್ದಾರೆ.” [ಅಲ್‌ಬುಖಾರಿ (1504) ಮತ್ತು ಮುಸ್ಲಿಮ್ (984) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ]

ಇತರ ಸಹಾಬಾಗಳು ಕೂಡ ಇದೇ ರೀತಿಯಲ್ಲಿ ಇದನ್ನು ವ್ಯಾಖ್ಯಾನಿಸಿದ್ದಾರೆ.

## ಫಿತ್ರ್ ಝಕಾತನ್ನು ಧರ್ಮ ನಿಯಮವನ್ನಾಗಿ ಮಾಡಿರುವುದರ ಹಿಂದಿರುವ ಯುಕ್ತಿ

ಆತ್ಮವನ್ನು ಕಲ್ಮಶಗಳಿಂದ ಹಾಗೂ ಜಿಪುಣತೆ ಮತ್ತಿತರ ಕೆಟ್ಟ ಸ್ವಭಾವಗಳಿಂದ ಶುದ್ಧೀಕರಿಸಲು, ಪ್ರತಿಫಲವನ್ನು ಪೂರ್ಣಗೊಳಿಸಲು, ಸತ್ಕರ್ಮಗಳನ್ನು ಪೋಷಿಸಲು, ಉಪವಾಸದ ಮೇಲೆ ಪರಿಣಾಮವನ್ನು ಬೀರಿ ಅದರ ಪುಣ್ಯವನ್ನು ಕಡಿತಗೊಳಿಸುವ ಅನಾವಶ್ಯಕ ಮತ್ತು ಅಶ್ಲೀಲ ಮಾತುಗಳು ಇತ್ಯಾದಿಗಳಿಂದ ಉಪವಾಸವನ್ನು ಶುದ್ಧೀಕರಿಸಲು, ಬಡಬಗ್ಗರು ಮತ್ತು ನಿರ್ಗತಿಕರಿಗೆ ದಯೆ ತೋರಲು ಮತ್ತು ಈದ್ ದಿನದಂದು ಕೈ ಚಾಚುವುದರಿಂದ ಅವರನ್ನು ಮುಕ್ತಗೊಳಿಸಲು ಫಿತ್ರ್ ಝಕಾತ್ ಸಹಕರಿಸುತ್ತದೆ.

ಇಬ್ನ್ ಅಬ್ಬಾಸ್(ﷺ) ಹೇಳುತ್ತಾರೆ:

{فَرَضَ رَسُولُ اللَّهِ ﷺ زَكَاةَ الْفِطْرِ طُهْرَةً لِلصَّائِمِ مِنَ اللَّغْوِ وَالرَّفَثِ وَطُعْمَةً لِلْمَسَاكِينِ} رواه أبو داود وابن ماجه والدارقطني والحاكم والبيهقي

"ಅನಾವಶ್ಯಕ ಮತ್ತು ಅಶ್ಲೀಲ ಮಾತುಗಳಿಂದ ಉಪವಾಸವನ್ನು ಶುದ್ಧೀಕರಿಸಲು ಮತ್ತು ಬಡವರಿಗೆ ಆಹಾರವಾಗಿ ಪ್ರವಾದಿ(ﷺ)ರವರು ಫಿತ್ರ್ ಝಕಾತನ್ನು ಕಡ್ಡಾಯಗೊಳಿಸಿದ್ದಾರೆ." [ಇದನ್ನು ಅಬೂದಾವೂದ್ (1609), ಇಬ್ನ್ ಮಾಜ (1827), ಅದ್ದಾರಕುತ್ನೀ (2/138), ಅಲ್‌ಹಾಕಿಮ್ (1/409) ಮತ್ತು ಅಲ್‌ಬೈಹಕೀ (4/163) ವರದಿ ಮಾಡಿದ್ದಾರೆ. ಅಲ್‌ಹಾಕಿಮ್ ಹೇಳಿದ್ದಾರೆ: ಬುಖಾರಿಯ ಶರ್ತ್ ಪ್ರಕಾರ ಇದು ಸಹೀಹ್ ಆಗಿದೆ. ಅದ್ದಾರಕುತ್ನೀ ಹೇಳಿದ್ದಾರೆ: ಇದರ ಸನದ್‌ನಲ್ಲಿ ವಿಮರ್ಶೆಗೊಳಗಾದವರು ಯಾರೂ ಇಲ್ಲ. ಅಲ್‌ಅಲ್ಬಾನೀ ತಮ್ಮ ಇರ್ವಾಉಲ್‌ನಲ್ಲಿ (3/332) ಇದನ್ನು ಹಸನ್ ಎಂದಿದ್ದಾರೆ.]

ರಮದಾನ್ ಉಪವಾಸವನ್ನು ಪೂರ್ಣಗೊಳಿಸಲು, ಕಿಯಾಮುಲ್ಲೈಲ್ ನೆರವೇರಿಸಲು ಮತ್ತು ಅಧಿಕವಾಗಿ ಸತ್ಕರ್ಮಗೈಯ್ಯಲು ಅಲ್ಲಾಹು ನೀಡಿದ ಅನುಗ್ರಹಕ್ಕಾಗಿರುವ ಕೃತಜ್ಞತೆಯ ಪ್ರಕಟನೆಯೂ ಇದರಲ್ಲಿದೆ.

ಅದೇ ರೀತಿ ಮುಸ್ಲಿಮ್ ಸಮುದಾಯದವರ ಮಧ್ಯೆ ಪ್ರೀತಿ ವಾತ್ಸಲ್ಯಗಳು ಹಬ್ಬಲು ಇದು ಕಾರಣವಾಗುತ್ತದೆ.

## ಫಿತ್ರ್ ಝಕಾತ್ ಯಾರಿಗೆಲ್ಲ ಕಡ್ಡಾಯ?

ಫಿತ್ರ್ ಝಕಾತ್ ದೈಹಿಕ ಝಕಾತ್. ಅದು ಮುಸ್ಲಿಮರೆಲ್ಲರ ಮೇಲೂ, ಗಂಡು–ಹೆಣ್ಣು, ಸ್ವತಂತ್ರ–ದಾಸ, ಪಟ್ಟಣದವನು–ಹಳ್ಳಿಯವನು ಎಂಬ ಬೇಧವಿಲ್ಲದೆ ಮುಸ್ಲಿಮರೆಂದು ಗಣಿಸಲ್ಪಡುವ ಎಲ್ಲರ ಮೇಲೆ ಕಡ್ಡಾಯವಾಗಿದೆ.

ಇದು ಕಡ್ಡಾಯವಾಗಿದೆ ಎಂಬುದಕ್ಕಿರುವ ಪುರಾವೆ ಇಬ್ನ್ ಉಮರ್(ﷺ)ರವರ ಹದೀಸ್:

{فَرَضَ رَسُولُ اللَّهِ ﷺ زَكَاةَ الْفِطْرِ صَاعًا مِنْ تَمْرٍ أَوْ صَاعًا مِنْ شَعِيرٍ عَلَى الْعَبْدِ وَالْحُرِّ وَالذَّكَرِ وَالْأُنْثَى وَالصَّغِيرِ وَالْكَبِيرِ مِنَ الْمُسْلِمِينَ وَأَمَرَ بِهَا أَنْ تُؤَدَّى قَبْلَ خُرُوجِ النَّاسِ إِلَى الصَّلَاةِ} متفق عليه.

"ಮುಸ್ಲಿಮರ ಪೈಕಿ ಗುಲಾಮ–ಸ್ವತಂತ್ರ, ಗಂಡು–ಹೆಣ್ಣು, ಕಿರಿಯ–ಹಿರಿಯರೆಲ್ಲರ ಮೇಲೂ ಖರ್ಜೂರ ಅಥವಾ ಜವೆಯಿಂದ ಒಂದು ಸಾಅ್‌ನಷ್ಟು ಫಿತ್ರ್ ಝಕಾತ್ ನೀಡುವುದನ್ನು ಪ್ರವಾದಿ(ﷺ)ರವರು ಕಡ್ಡಾಯಗೊಳಿಸಿದ್ದಾರೆ. ಈದ್ ನಮಾಝ್‌ಗೆ ಹೊರಡುವುದಕ್ಕೆ ಮುಂಚಿತವಾಗಿ ಅದನ್ನು ಸಂದಾಯ ಮಾಡಬೇಕೆಂದೂ ಅವರು ಆದೇಶಿಸಿದ್ದಾರೆ." [ಅಲ್‌ಬುಖಾರಿ (1504) ಮತ್ತು ಮುಸ್ಲಿಮ್ (984)]

ಕಡ್ಡಾಯದ ಆದೇಶವು ಕರಾರುವಾಕ್ಕಾಗಿ ಬಂದಿರುವ ಈ ಮೇಲಿನ ಹದೀಸ್ ಮತ್ತು ಇದರಂತಿರುವ ಇತರ ಹದೀಸ್‌ಗಳಲ್ಲಿರುವ ಪ್ರಕಾರ ಫಿತ್ರ್ ಝಕಾತ್ ನೀಡುವುದು ಧನಿಕರ ಮೇಲೆ ಕಡ್ಡಾಯವಾಗಿದೆ. ಇಲ್ಲಿ ಧನಿಕರು ಎಂಬುದರ ಉದ್ದೇಶ ಸಂಪತ್ತಿನ ಝಕಾತ್ ನೀಡುವುದು ಕಡ್ಡಾಯವಾಗಿರುವ ಧನಿಕರಲ್ಲ. ಬದಲಾಗಿ ಫಿತ್ರ್ ಝಕಾತನ್ನು ನೀಡುವುದು ಕಡ್ಡಾಯವಾಗಿರುವ ಧನಿಕರು. ಅಂದರೆ ಯಾರ ಬಳಿ ಈದ್‌ನ ದಿನ ಮತ್ತು ರಾತ್ರಿಯಂದು

ತನಗೆ, ತನ್ನ ಕುಟುಂಬಕ್ಕೆ ಮತ್ತು ಯಾರ ಖರ್ಚನ್ನು ನೋಡುವುದು ತನಗೆ ಕಡ್ಡಾಯವಾಗಿದೆಯೋ ಅವರ ಆವಶ್ಯಕತೆಗಳನ್ನು ಕಳೆದು ಎರಡು ಸಾಅ್‌ನಷ್ಟು ಆಹಾರ ಪದಾರ್ಥಗಳು ಉಳಿದಿದ್ದರೆ ಅವನ ಮೇಲೆ ಫಿತ್ರ್ ಝಕಾತ್ ಕಡ್ಡಾಯವಾಗಿದೆ.

## ಫಿತ್ರ್ ಝಕಾತ್ ಆಗಿ ಏನೆಲ್ಲ ನೀಡಬಹುದು?

ಸಹೀಹಾದ ಹದೀಸೊಂದರಲ್ಲಿ ಅಬೂ ಸಈದ್ ಅಲ್‌ಖುದ್ರೀ(ﷺ) ಹೇಳುತ್ತಾರೆ:

{كُنَّا نُعْطِيهَا فِي زَمَانِ النَّبِيِّ ﷺ صَاعًا مِنْ طَعَامٍ أَوْ صَاعًا مِنْ تَمْرٍ أَوْ صَاعًا مِنْ شَعِيرٍ أَوْ صَاعًا مِنْ زَبِيبٍ} رواه البخاري

ಪ್ರವಾದಿ(ﷺ)ರವರ ಕಾಲದಲ್ಲಿ ನಾವು ಆಹಾರ ಪದಾರ್ಥದಿಂದ ಅಥವಾ ಖರ್ಜೂರದಿಂದ ಅಥವಾ ಜವೆಯಿಂದ ಅಥವಾ ಒಣದ್ರಾಕ್ಷೆಯಿಂದ ಒಂದು ಸಾಅ್‌ನಷ್ಟು ಫಿತ್ರ್ ಝಕಾತ್ ನೀಡುತ್ತಿದ್ದೆವು.” [ಅಲ್‌ಬುಖಾರಿ (1510)]

ಸಹೀಹಾದ ಇನ್ನೊಂದು ವರದಿಯಲ್ಲಿ ಹೀಗಿದೆ:

{وَكَانَ طَعَامَنَا الشَّعِيرُ وَالزَّبِيبُ وَالْأَقِطُ وَالتَّمْرُ} رواه البخاري

“ಜವೆ, ಒಣದ್ರಾಕ್ಷಿ, ಅಕಿತ್ (ಹಾಲಿನಿಂದ ತಯಾರಿಸಲಾಗುವ ಖಾದ್ಯ) ಮತ್ತು ಖರ್ಜೂರ ನಮ್ಮ ಆಹಾರ ಪದಾರ್ಥಗಳಾಗಿದ್ದವು.” [ಅಲ್‌ಬುಖಾರಿ (1510)]

ಆದ್ದರಿಂದ ಈ ಮೇಲಿನ ಆಹಾರ ಪದಾರ್ಥಗಳು ಲಭ್ಯವಿದ್ದರೆ ಮತ್ತು ಅವುಗಳನ್ನು ಆಹಾರವಾಗಿ ಸ್ವೀಕರಿಸುವವರು ಉಪಸ್ಥಿತರಿದ್ದರೆ ಅದನ್ನು ನೀಡುವುದು ಶ್ರೇಷ್ಠ. ಅವುಗಳಲ್ಲಿ ಅತ್ಯುತ್ತಮವಾದುದನ್ನು ಮತ್ತು ಹೆಚ್ಚು ಪ್ರಯೋಜನವಿರುವುದನ್ನು ನೀಡಬೇಕು. ಯಾಕೆಂದರೆ ಅಲ್‌ಬುಖಾರಿಯಲ್ಲಿರುವ ಹದೀಸಿನ ಪ್ರಕಾರ ಇಬ್ನ್ ಉಮರ್(ﷺ)ರವರು ಖರ್ಜೂರವನ್ನೇ ಫಿತ್ರ್ ಝಕಾತ್ ಆಗಿ ನೀಡುತ್ತಿದ್ದರು. [ಅಲ್‌ಬುಖಾರಿ (1511)]

ಮುವತ್ತದಲ್ಲಿ ವರದಿಯಾಗಿರುವಂತೆ ನಾಫಿಅ್ ಹೇಳುತ್ತಾರೆ:

{أَنَّ عَبْدَ اللَّهِ بْنَ عُمَرَ كَانَ لَا يُخْرِجُ فِي زَكَاةِ الْفِطْرِ إِلَّا التَّمْرَ إِلَّا مَرَّةً وَاحِدَةً فَإِنَّهُ أَخْرَجَ شَعِيرًا} رواه مالك في الموطأ

“ಇಬ್ನ್ ಉಮರ್(ﷺ)ರವರು ಫಿತ್ರ್ ಝಕಾತ್ ಆಗಿ ಖರ್ಜೂರವನ್ನು ಹೊರತು ಬೇರೇನನ್ನೂ ನೀಡುತ್ತಿರಲಿಲ್ಲ. ಆದರೆ ಒಂದು ಬಾರಿ ಅವರು ಜವೆಯನ್ನು ನೀಡಿದ್ದರು.” [ಮುವತ್ತ (1/284)]

{فَأَعْوَزَ أَهْلُ الْمَدِينَةِ مِنَ التَّمْرِ فَأَعْطَى شَعِيرًا} رواه البخاري

“ಯಾಕೆಂದರೆ ಆಗ ಮದೀನದಲ್ಲಿ ಖರ್ಜೂರ ಲಭ್ಯವಿರಲಿಲ್ಲ. ಆದ್ದರಿಂದ ಅವರು ಜವೆಯನ್ನು ನೀಡಿದರು.” [ಅಲ್‌ಬುಖಾರಿ (1511)]

ಆದ್ದರಿಂದ ಇದರಲ್ಲಿರುವ ಸೂಚನೆಯ ಪ್ರಕಾರ ಇವುಗಳಲ್ಲಿ ಅತ್ಯುತ್ತಮವಾದ ವಿಧವನ್ನು ಮತ್ತು ಬಡವರಿಗೆ ಹೆಚ್ಚು ಪ್ರಯೋಜನಕರವಾದುದನ್ನು ನೀಡಬೇಕು. ಮಾಲಿಕ್, ಅಶ್ಶಾಫಿಈ, ಅಹ್ಮದ್ ಮತ್ತಿತರ ಹೆಚ್ಚಿನ ವಿದ್ವಾಂಸರ ಅಭಿಪ್ರಾಯ ಪ್ರಕಾರ ಗೋಧಿಯು ಶ್ರೇಷ್ಠವಾಗಿದೆ. ಅದರ ನಂತರದ ಸ್ಥಾನವು ಖರ್ಜೂರವಾಗಿದೆ.

ಅಲ್ಲಾಹು ಹೇಳುತ್ತಾನೆ:

﴿لَن تَنَالُواْ ٱلۡبِرَّ حَتَّىٰ تُنفِقُواْ مِمَّا تُحِبُّونَۚ﴾ [آل عمران: 92].

“ನೀವು ಏನನ್ನು ಇಷ್ಟಪಡುತ್ತಿರುವಿರೋ ಅದರಿಂದ ನೀವು ವ್ಯಯಿಸುವ ತನಕ ನಿಮಗೆ ಪುಣ್ಯವನ್ನು ಸಂಪಾದಿಸಲು ಸಾಧ್ಯವಾಗದು.” [ಕುರ್‌ಆನ್ 3:92]

ಆದ್ದರಿಂದ ಇವುಗಳ ಪೈಕಿ ಯಾವುದಾದರೂ ಒಂದನ್ನು ದಿನನಿತ್ಯದ ಆಹಾರವಾಗಿ ಸೇವಿಸುವವರಿದ್ದರೆ ಅವರಿಗೆ ಅದನ್ನೇ ನೀಡುವುದು ಶ್ರೇಷ್ಠ. ಯಾಕೆಂದರೆ ಇದು ಸುನ್ನತ್‌ನೊಂದಿಗೆ ಹೊಂದಾಣಿಕೆಯಾಗುತ್ತದೆ ಮತ್ತು ಧರ್ಮದ ವಿಷಯದಲ್ಲಿ ತೋರಿಸುವ ಸೂಕ್ಷ್ಮತೆಯೂ ಆಗಿದೆ. ಆದರೆ ಇವುಗಳನ್ನು ಆಹಾರವಾಗಿ ಸೇವಿಸುವವರು ಇಲ್ಲದಿದ್ದರೆ ಆಯಾ ಊರಿನ ಆಹಾರ ಪದಾರ್ಥವನ್ನು ನೀಡಬಹುದು.

ಮಾಲಿಕ್, ಅಶ್ಶಾಫಿಈ, ಅಹ್ಮದ್ ಮತ್ತಿತರ ವಿದ್ವಾಂಸರ ಅಭಿಪ್ರಾಯ ಪ್ರಕಾರ ಹದೀಸಿನಲ್ಲಿ ವರದಿಯಾದ ಐದು ವಿಧಗಳು ಲಭ್ಯವಿದ್ದರೂ ಕೂಡ ಜನರು ದಿನನಿತ್ಯದ ಆಹಾರವಾಗಿ ಸೇವಿಸುವ ಯಾವುದೇ ಧಾನ್ಯವನ್ನಾಗಲಿ, ಫಲವನ್ನಾಗಲಿ ನೀಡಿದರೆ ಸಾಕು. ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಾ ಈ ಅಭಿಪ್ರಾಯವನ್ನು ಅಂಗೀಕರಿಸಿದ್ದಾರೆ. ಇದಕ್ಕೆ ಅವರು ಅಲ್ಲಾಹನ ಈ ವಚನವನ್ನು—

﴿ مِنۡ أَوۡسَطِ مَا تُطۡعِمُونَ أَهۡلِيكُمۡ ﴾ [المائدة: 89] .

"ನಿಮ್ಮ ಕುಟುಂಬಕ್ಕೆ ನೀವು ಆಹಾರವಾಗಿ ನೀಡುವ ಮಧ್ಯಮ ತರದ ಆಹಾರದಿಂದ.." [ಕುರ್‌ಆನ್ 5:89] ಮತ್ತು "ಆಹಾರ ಪದಾರ್ಥಗಳಿಂದ ಒಂದು ಸಾಅ್" ಎಂಬ ಪ್ರವಾದಿ(ﷺ)ರವರ ವಚನವನ್ನು ಪುರಾವೆಯಾಗಿ ನೀಡುತ್ತಾರೆ. ಆಹಾರ ಪದಾರ್ಥವು ಗೋಧಿಯೋ ಜವೆಯೋ ಆಗಬಹುದು. ನಂತರ ಅವರು (ಇಬ್ನ್ ತೈಮಿಯ್ಯಃ) ಹೇಳುತ್ತಾರೆ:

"ಇದು ಹೆಚ್ಚಿನ ವಿದ್ವಾಂಸರ ಅಭಿಪ್ರಾಯ ಮತ್ತು ಅಭಿಪ್ರಾಯಗಳ ಪೈಕಿ ಅತ್ಯಂತ ನಿಖರವಾದುದು. ದಾನಧರ್ಮಗಳ ಮೂಲ ಉದ್ದೇಶದ ಪ್ರಕಾರ ಬಡವರೊಂದಿಗೆ ಸಮಾನತೆಯನ್ನು ಕಲ್ಪಿಸಬೇಕಾದುದು ಕಡ್ಡಾಯ."

ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

ಈ ಅಭಿಪ್ರಾಯವು ಅತ್ಯಂತ ಸೂಕ್ತವಾಗಿದೆಯೆಂಬುದರಲ್ಲಿ ಎರಡು ಮಾತಿಲ್ಲ. ಯಾಕೆಂದರೆ ಇದರ ಉದ್ದೇಶವು ಈದ್ ದಿನದಂದು ಬಡವರು ಹಸಿದಿರುವುದನ್ನು ತಡೆಯಲು ಮತ್ತು ಊರ ಜನರು ಆಹಾರವಾಗಿ ಸೇವಿಸುವುದನ್ನೇ ಅವರೂ ಸೇವಿಸುವಂತೆ ಮಾಡುವುದು.

ಪ್ರವಾದಿ(ﷺ)ರವರು ಹೇಳಿದರು:

{أَغْنُوهُمْ فِي هَذَا الْيَوْمِ عَنِ الطَّوَافِ} رواه سعيد بن منصور في سننه والدارقطني والبيهقي وضعفه الألباني

"ಈ ದಿನದಂದು (ಈದ್ ದಿನದಂದು) ಅವರು ಊರು ಸುತ್ತಿ ಬೇಡುವುದರಿಂದ ಅವರನ್ನು ಮುಕ್ತಗೊಳಿಸಿರಿ." [ಇದನ್ನು ಸಈದ್ ಇಬ್ನ್

ಮನ್ಸೂರ್ ತನ್ನ ಸುನನ್‌ನಲ್ಲಿ, ಅದ್ದಾರಕುತ್ನೀ (2/153), ಅಲ್‌ಬೈಹಕೀ (4/175) ವರದಿ ಮಾಡಿದ್ದಾರೆ. ಶೈಖ್ ಅಲ್‌ಅಲ್ಬಾನೀ ತಮ್ಮ ಇರ್ವಾಅ್‌ನಲ್ಲಿ (844) ಇದನ್ನು ದಈಫ್ ಎಂದಿದ್ದಾರೆ.]

## ಫಿತ್ರ್ ಝಕಾತ್ ಎಷ್ಟು ನೀಡಬೇಕು?

ಸಹೀಹಾದ ಹದೀಸ್‌ಗಳಲ್ಲಿ ದೃಢಪಟ್ಟಿರುವ ಪ್ರಕಾರ ಪ್ರವಾದಿ(ﷺ)ರವರು ಒಂದು ಸಾಅ್‌ನಷ್ಟು ಫಿತ್ರ್ ಝಕಾತ್ ನೀಡುವುದನ್ನು ಕಡ್ಡಾಯಗೊಳಿಸಿದ್ದಾರೆ. [ಅಲ್‌ಬುಖಾರಿ (1504) ಮತ್ತು ಮುಸ್ಲಿಮ್ (984) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ]

ಒಂದು ಸಾಅ್ ಎಂದರೆ ನಾಲ್ಕು ಮುದ್ದ್‌ಗಳು. ಒಂದು ಮುದ್ದ್ ಎಂದರೆ ಮಧ್ಯಮ ವಯಸ್ಸಿನ ವ್ಯಕ್ತಿ ಎರಡು ಅಂಗೈಗಳನ್ನು ಜೋಡಿಸಿ ಎಷ್ಟು ಗೋಧಿ ಮುಂತಾದ ಧಾನ್ಯಗಳನ್ನು ಬಾಚುತ್ತಾನೋ ಅಷ್ಟು. ಇದು ಸರಿಸುಮಾರು ಎರಡೂವರೆ ಕಿಲೋಗ್ರಾಮ್. ಇದಕ್ಕಿಂತ ಹೆಚ್ಚು ನೀಡಿದರೆ ಹೆಚ್ಚಾಗಿ ಕೊಟ್ಟದ್ದು ಸಾಮಾನ್ಯ ದಾನಧರ್ಮದ ಸಾಲಿನಲ್ಲಿ ಸೇರುತ್ತದೆ.

ಅಲ್ಲಾಹು ಹೇಳುತ್ತಾನೆ:

﴿ فَمَن يَعۡمَلۡ مِثۡقَالَ ذَرَّةٍ خَيۡرٗا يَرَهُۥ ۝٧ ﴾ [الزلزلة: 7] .

“ಯಾರಾದರೂ ಒಂದು ಅಣುವಿನ ತೂಕದಷ್ಟು ಒಳಿತನ್ನು ಮಾಡಿದರೆ ಅವನದನ್ನು ಕಾಣುವನು.” [ಕುರ್‌ಆನ್ 99:7]

# ಫಿತ್ರ್ ಝಕಾತ್ ಯಾವಾಗ ನೀಡಬೇಕು?

ಫಿತ್ರ್ ಝಕಾತ್ ನೀಡುವುದಕ್ಕೆ ಎರಡು ಸಮಯಗಳಿವೆ:

ಒಂದು: ಈದ್‌ನ ಹಿಂದಿನ ದಿನ ಸೂರ್ಯಾಸ್ತದ ಬಳಿಕ ಈದ್‌ನ ದಿನದ ಆರಂಭದ ಮಧ್ಯೆ. ಇದರಲ್ಲಿ ಶ್ರೇಷ್ಠವಾದುದು ಫಜ್ರ್ ನಮಾಝ್ ಮತ್ತು ಈದ್ ನಮಾಝ್‌ನ ಮಧ್ಯೆ ನೀಡುವುದು. ಅಲ್‌ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ಇಬ್ನ್ ಉಮರ್(ﷺ)ರವರ ಹದೀಸಿನಲ್ಲಿ ಹೀಗಿದೆ:

{وَأَمَرَ بِهَا أَنْ تُؤَدَّى قَبْلَ خُرُوجِ النَّاسِ إِلَى الصَّلَاةِ} متفق عليه.

“ಜನರು ಈದ್ ನಮಾಝ್‌ಗಾಗಿ ಹೊರಡುವುದಕ್ಕೆ ಮುಂಚೆ ಅದನ್ನು ಕೊಟ್ಟುಬಿಡಬೇಕೆಂದು ಪ್ರವಾದಿ(ﷺ)ರವರು ಆದೇಶಿಸಿದ್ದಾರೆ.” [ಅಲ್‌ಬುಖಾರಿ (1504) ಮತ್ತು ಮುಸ್ಲಿಮ್ (984)]

ಅಲ್ಲಾಹು ಹೇಳುತ್ತಾನೆ:

﴿ قَدْ أَفْلَحَ مَن تَزَكَّىٰ ۝١٤ وَذَكَرَ ٱسْمَ رَبِّهِۦ فَصَلَّىٰ ۝١٥ ﴾ [الأعلى: 14-15].

“ತನ್ನನ್ನು ಸ್ವತಃ ಶುದ್ಧೀಕರಿಸಿದವನು ಮತ್ತು ಅಲ್ಲಾಹನ ನಾಮವನ್ನು ಸ್ಮರಿಸಿ ನಮಾಝ್ ಮಾಡಿದವನು ಯಶಸ್ಸನ್ನು ಗಳಿಸಿದನು.” [ಕುರ್‌ಆನ್ 87:14–15]

ಈ ಆಯತ್ತಿನಲ್ಲಿ ಹೇಳಲಾಗಿರುವುದು ಈದ್‌ನ ದಿನದಂದು ನಮಾಝ್‌ಗೆ ಮುಂಚೆ ಫಿತ್ರ್ ಝಕಾತ್ ನೀಡುವ ವ್ಯಕ್ತಿಯ ಬಗ್ಗೆಯೆಂದು ಸಲಫ್‌ಗಳ ಪೈಕಿ ಕೆಲವರು ಇದನ್ನು ವ್ಯಾಖ್ಯಾನಿಸಿದ್ದಾರೆ.

ಎರಡು: ಈದ್‌ಗಿಂತ ಒಂದು ಅಥವಾ ಎರಡು ದಿನ ಮುಂಚೆ ನೀಡುವುದು. ಸಹೀಹುಲ್ ಬುಖಾರಿಯಲ್ಲಿ ಹೀಗಿದೆ:

{وَكَانُوا يُعْطُونَ قَبْلَ الْفِطْرِ بِيَوْمٍ أَوْ يَوْمَيْنِ} رواه البخاري

"ಸಹಾಬಾಗಳು ಈದುಲ್ ಫಿತ್ರ್‌ಗೆ ಒಂದು ಅಥವಾ ಎರಡು ದಿನ ಮುಂಚೆ ಫಿತ್ರ್ ಝಕಾತನ್ನು ನೀಡುತ್ತಿದ್ದರು." [ಅಲ್‌ಬುಖಾರಿ (1511). ಇಮಾಮ್ ಮಾಲಿಕ್ ಹೇಳುತ್ತಾರೆ: ಅದರಲ್ಲಿ ವೈಶಾಲ್ಯತೆಯಿದೆ. ಅಲ್ಲಾಹು ಇಚ್ಛಿಸಿದರೆ ಈದ್ ದಿನದ ಪ್ರಭಾತಕ್ಕಿಂತ ಮುಂಚೆಯೂ ಅದರ ನಂತರವೂ ಫಿತ್ರ್ ಝಕಾತನ್ನು ನೀಡಬಹುದು. (ಮುವತ್ತ 1/285)]

ಇಬ್ನ್ ಅಬ್ಬಾಸ್(ﷺ)ರವರ ಹದೀಸಿನಲ್ಲಿ ಹೀಗಿದೆ:

{مَنْ أَدَّاهَا قَبْلَ الصَّلَاةِ فَهِيَ زَكَاةٌ مَقْبُولَةٌ وَمَنْ أَدَّاهَا بَعْدَ الصَّلَاةِ فَهِيَ صَدَقَةٌ مِنْ الصَّدَقَاتِ} رواه أبو داود وابن ماجه والدارقطني والحاكم والبيهقي

"ಯಾರಾದರೂ ನಮಾಝ್‌ಗೆ ಮುಂಚೆ ನೀಡಿದರೆ ಅದು ಸ್ವೀಕಾರಾರ್ಹವಾದ ಝಕಾತ್ ಆಗಿದೆ. ಯಾರಾದರೂ ನಮಾಝ್‌ನ ನಂತರ ನೀಡುವುದಾದರೆ ಅದು ಕೇವಲ ದಾನಗಳಲ್ಲಿ ಸೇರಿದ ಒಂದು ದಾನ ಮಾತ್ರವಾಗಿದೆ." [ಅಬೂದಾವೂದ್ (1609), ಇಬ್ನ್ ಮಾಜ (1827), ಅದ್ದಾರಕುತ್ನೀ (2/138), ಅಲ್‌ಹಾಕಿಮ್ (1/409) ಮತ್ತು ಅಲ್‌ಬೈಹಕೀ (4/163)]

ಇಬ್ನುಲ್ ಕಯ್ಯಿಮ್ ಹೇಳುತ್ತಾರೆ: “ಒಟ್ಟಿನಲ್ಲಿ ಈದ್ ನಮಾಝ್ ಮುಗಿಯುವವರೆಗೆ ಅದನ್ನು ಮುಂದೂಡುವುದು ಸಮ್ಮತಾರ್ಹವಲ್ಲ.”

ಅಂದರೆ ಯಾವುದೇ ವಿನಾಯಿತಿ ಇಲ್ಲದಿದ್ದರೆ ನಮಾಝ್ ಮುಗಿಯುವುದರೊಂದಿಗೆ ಅದರ ಅವಧಿಯು ಕೊನೆಗೊಳ್ಳುತ್ತದೆ.

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುತ್ತಾರೆ: “ಈದ್ ನಮಾಝ್ ಮುಗಿಯುವವರೆಗೆ ಅದನ್ನು ಮುಂದೂಡಿದರೆ ನಂತರ ಅದನ್ನು ಮರುಸಂದಾಯ ಮಾಡಬೇಕು. ಅವಧಿಯು ಕೊನೆಗೊಳ್ಳುವುದರಿಂದ ಅದು ಕಡ್ಡಾಯದಿಂದ ಮುಕ್ತವಾಗುವುದಿಲ್ಲ.”

ಇತರರು ಹೇಳುತ್ತಾರೆ: “ಅದನ್ನು ಮುಂದೂಡುವುದರಿಂದಾಗಿ ಯಾರ ಮೇಲೆ ಅದು ಕಡ್ಡಾಯವಾಗಿದೆಯೋ ಅವನು ಆ ಕಡ್ಡಾಯದಿಂದ ಮುಕ್ತನಾಗುವುದಿಲ್ಲ. ಅವನು ಅದನ್ನು ಸಂದಾಯ ಮಾಡುವವರೆಗೆ ಅದು ಅವನ ಮೇಲೆ ಸಾಲವಾಗಿ ಉಳಿಯುತ್ತದೆ. ಈದ್ ದಿನವು ಕಳೆಯುವವರೆಗೂ ಅದನ್ನು ಮುಂದೂಡುವುದು ನಿಷಿದ್ಧ. ಯಾರಾದರೂ ಈ ರೀತಿ ಉದ್ದೇಶಪೂರ್ವಕವಾಗಿ ಮುಂದೂಡಿದರೆ ಉಲಮಾಗಳ ಒಮ್ಮತಾಭಿಪ್ರಾಯ ಪ್ರಕಾರ ಅವನು ಪಾಪ ಮಾಡಿದವನಾಗುವನು.”

## ಫಿತ್ರ್ ಝಕಾತನ್ನು ಯಾರಿಗೆ ನೀಡಬೇಕು?

ಇಬ್ನ್ ಅಬ್ಬಾಸ್(ﷺ)ರವರ ಹದೀಸಿನಲ್ಲಿ ಹೀಗಿದೆ:

{فَرَضَ رَسُولُ اللَّهِ ﷺ زَكَاةَ الْفِطْرِ طُهْرَةً لِلصَّائِمِ مِنَ اللَّغْوِ وَالرَّفَثِ وَطُعْمَةً لِلْمَسَاكِينِ} رواه أبو داود وابن ماجه والدارقطني والحاكم والبيهقي

“ಅನಾವಶ್ಯಕ ಮತ್ತು ಅಶ್ಲೀಲ ಮಾತುಗಳಿಂದ ಉಪವಾಸವನ್ನು ಶುದ್ಧೀಕರಿಸಲು ಮತ್ತು ಬಡವರಿಗೆ ಆಹಾರವಾಗಿ ಪ್ರವಾದಿ(ﷺ)ರವರು ಫಿತ್ರ್ ಝಕಾತನ್ನು ಕಡ್ಡಾಯಗೊಳಿಸಿದ್ದಾರೆ.” [ಅಬೂದಾವೂದ್ (1609), ಇಬ್ನ್ ಮಾಜ (1827), ಅದ್ದಾರಕುತ್ನೀ (2/138), ಅಲ್‌ಹಾಕಿಮ್ (1/409) ಮತ್ತು ಅಲ್‌ಬೈಹಕೀ (4/163)]

ಈ ಹದೀಸಿನಲ್ಲಿರುವ ಪ್ರಕಾರ ಫಿತ್ರ್ ಝಕಾತನ್ನು ಬಡವರಿಗೆ ನೀಡಬೇಕು.

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುತ್ತಾರೆ: “ಪ್ರಾಯಶ್ಚಿತ್ತವನ್ನು ಸ್ವೀಕರಿಸಲು ಯಾರು ಅರ್ಹರೋ ಅವರಿಗೆ. ಅವರೇ ಅದರ ಅತ್ಯಂತ ಅಗತ್ಯವಿರುವವರು.”

ಒಂದು ಜಮಾಅತ್‌ನಲ್ಲಿರುವವರು ಅಥವಾ ಒಂದು ಮನೆಯವರು ತಮ್ಮ ಫಿತ್ರ್ ಝಕಾತನ್ನು ಒಬ್ಬನೇ ಬಡವನಿಗೆ ನೀಡುವುದು ಸಮ್ಮತಾರ್ಹ. ಅದೇ ರೀತಿ ಅಗತ್ಯವಿರುವವರು ಅನೇಕ ಜನರಿದ್ದರೆ ಒಬ್ಬ ವ್ಯಕ್ತಿಯ ಫಿತ್ರ್ ಝಕಾತನ್ನು ಹಲವಾರು ಬಡವರಿಗೆ ಹಂಚುವುದೂ ಸಮ್ಮತಾರ್ಹ. ಆದರೆ ಅದನ್ನು ಬಡವರಿಗೇ ಕೊಡಬೇಕು ಅಥವಾ ತನ್ನ ಪರವಾಗಿ ಅದನ್ನು ಬಡವರಿಗೆ ತಲುಪಿಸುವ ಹೊಣೆಯನ್ನು ವಹಿಸಿಕೊಂಡವರಿಗೆ ಒಪ್ಪಿಸಬೇಕು.

# ಫಿತ್ರ್ ಝಕಾತ್ ಆಗಿ ಹಣವನ್ನು ನೀಡಬಹುದೇ?

ಫಿತ್ರ್ ಝಕಾತ್ ಆಗಿ ಹಣವನ್ನು ನೀಡುವುದು ಸಮ್ಮತಾರ್ಹವಲ್ಲ. ಯಾಕೆಂದರೆ ಹಣ ಅಸ್ತಿತ್ವದಲ್ಲಿದ್ದು ಕೂಡ ಪ್ರವಾದಿ(ﷺ)ರವರು ಆಹಾರ ಪದಾರ್ಥಗಳನ್ನೇ ನೀಡಬೇಕೆಂದು ಆದೇಶಿಸಿದ್ದಾರೆ. ಹಣವನ್ನು ನೀಡುವುದು ಸಮ್ಮತಾರ್ಹವಾಗಿದ್ದರೆ ಪ್ರವಾದಿ(ﷺ)ರವರು ಅದನ್ನು ವಿವರಿಸಿಕೊಡುತ್ತಿದ್ದರು. ಯಾಕೆಂದರೆ ವಿವರಣೆಯನ್ನು ಅತ್ಯಗತ್ಯ ಸಮಯದಲ್ಲಿ ನೀಡುವುದರಿಂದ ಮುಂದೂಡುವುದು ಸಮ್ಮತಾರ್ಹವಲ್ಲ. ಅದೇ ರೀತಿ ಫಿತ್ರ್ ಝಕಾತನ್ನು ಹಣದ ರೂಪದಲ್ಲಿ ನೀಡಲು ಸಾಧ್ಯವಿದ್ದೂ ಕೂಡ ಸಹಾಬಾಗಳ ಪೈಕಿ ಯಾರೂ ಕೂಡ ಹಣ ನೀಡಿದ್ದಾಗಿ ತಿಳಿದು ಬಂದಿಲ್ಲ. ಪ್ರವಾದಿ(ﷺ)ರವರ ಸುನ್ನತ್ತನ್ನು ಗ್ರಹಿಸುವುದರಲ್ಲಿ ಮತ್ತು ಅದರ ಪ್ರಕಾರ ಕಾರ್ಯೋನ್ಮುಖರಾಗುವುದರಲ್ಲಿ ಅವರು ಅತ್ಯಂತ ಆಸಕ್ತಿಯುಳ್ಳವರಾಗಿದ್ದರು.

ಇಮಾಮ್ ಅಹ್ಮದ್ ಹೇಳುತ್ತಾರೆ: “ಹಣವನ್ನು ನೀಡುವುದು ಸಮ್ಮತಾರ್ಹವಲ್ಲ.” ಆಗ ಅವರೊಂದಿಗೆ ಹೇಳಲಾಯಿತು: “ಜನರು ಹೇಳುತ್ತಾರೆ, ಉಮರ್ ಇಬ್ನ್ ಅಬ್ದಿಲ್ ಅಝೀಝ್ ಫಿತ್ರ್ ಝಕಾತ್ ಆಗಿ ಹಣವನ್ನು ಪಡೆಯುತ್ತಿದ್ದರೆಂದು?” ಆಗ ಇಮಾಮ್ ಅಹ್ಮದ್ ಹೇಳಿದರು: “ಪ್ರವಾದಿ(ﷺ)ರವರ ಮಾತನ್ನು ನಿರ್ಲಕ್ಷಿಸಿ ಇಂತಿಂತಹ ವ್ಯಕ್ತಿ ಹೇಳಿದ್ದಾನೆಂದು ಹೇಳುವುದು ಸರಿಯೇ?

ಇಬ್ನ್ ಉಮರ್(رضي الله عنه) ಹೇಳುತ್ತಾರೆ:

{فَرَضَ رَسُولُ اللَّهِ ﷺ زَكَاةَ الْفِطْرِ صَاعًا مِنْ تَمْرٍ أَوْ صَاعًا مِنْ شَعِيرٍ}

متفق عليه.

“ಖರ್ಜೂರ ಅಥವಾ ಜವೆಯಿಂದ ಒಂದು ಸಾಅ್‌ನಷ್ಟು ಫಿತ್ರ್ ಝಕಾತ್ ನೀಡುವುದನ್ನು ಪ್ರವಾದಿ(ﷺ)ರವರು ಕಡ್ಡಾಯಗೊಳಿಸಿದ್ದಾರೆ.” [ಅಲ್‌ಬುಖಾರಿ (1504) ಮತ್ತು ಮುಸ್ಲಿಮ್ (984)]

## ಫಿತ್ರ್ ಝಕಾತನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗಾಯಿಸಬಹುದೇ?

ಮೂಲವಿಧಿಯ ಪ್ರಕಾರ ಈದುಲ್ ಫಿತ್ರ್‌ನಂದು ಒಬ್ಬ ವ್ಯಕ್ತಿ ಯಾವ ಊರಿನಲ್ಲಿರುವನೋ ಆ ಊರಿನ ಬಡಬಗ್ಗರಿಗೆ ಝಕಾತುಲ್ ಫಿತ್ರ್ ನೀಡಬೇಕು. ಈದ್‌ನ ಹಿಂದಿನ ದಿನದ ಸೂರ್ಯಾಸ್ತದ ನಂತರ ಇದು ಕಡ್ಡಾಯವಾಗುತ್ತದೆ. ಅದನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಸಾಗಿಸುವುದರಿಂದ ಅದನ್ನು ಕೊಡಬೇಕಾದ ಸಮಯ ಕಳೆದುಹೋಗುವ ಸಾಧ್ಯತೆಯಿದೆ. ಮಾತ್ರವಲ್ಲ, ಕೆಲವೊಮ್ಮೆ ಆಹಾರ ಪದಾರ್ಥಗಳ ಬದಲಿಗೆ ಹಣವನ್ನು ನೀಡುವ ಮತ್ತು ಶರೀಅತ್ತಿನ ನಿಯಮವು ಜನರಿಂದ ಕಣ್ಮರೆಯಾಗುವ ಸಾಧ್ಯತೆಯಿದೆ. ಜನರು ಪ್ರವಾದಿ(ﷺ)ರವರ ಸುನ್ನತ್‌ನ ಬಗ್ಗೆ ಅಜ್ಞಾನಿಗಳಾಗುವ ಸಂಭವವೂ ಇದೆ. ಪ್ರವಾದಿ(ﷺ)ರಿಂದಾಗಲಿ, ಖುಲಫಾಉ ರ್ರಾಶಿದೀನ್‌ಗಳಿಂದಾಗಲಿ ಅಥವಾ ಸಹಾಬಾಗಳ ಪೈಕಿ ಯಾರೊಬ್ಬರಿಂದಾಗಲಿ ಅವರು ಒಂದು ಊರಿನ ಫಿತ್ರ್ ಝಕಾತನ್ನು ಇನ್ನೊಂದು ಊರಿಗೆ ಸಾಗಿಸುತ್ತಿದ್ದರೆಂಬುದು ದೃಢಪಟ್ಟಿರುವುದಾಗಿ ನಾನು ಅರಿತಿಲ್ಲ.

ಆದ್ದರಿಂದ ಒಂದು ಊರಿನಿಂದ ಇನ್ನೊಂದು ಊರಿಗೆ ಫಿತ್ರ್ ಝಕಾತನ್ನು ಸಾಗಿಸುವುದು, ಅದನ್ನು ಜನರಿಗೆ ಬೋಧಿಸುವುದು ಮತ್ತು ಪ್ರೇರೇಪಿಸುವುದು ನೂತನವಾದದಲ್ಲಿ ಗಣಿಸಬೇಕಾಗುತ್ತದೆ. ಅದರ ಕುರಿತು ಜಾಗೃತರಾಗಿರುವುದು ಮತ್ತು ಅದನ್ನು ಬಿಟ್ಟುಬಿಡುವುದು ಕಡ್ಡಾಯವಾಗಿದೆ ಹಾಗೂ ಜನರು ಮಾಡುತ್ತಿರುವ ಈ ವಿರುದ್ಧ ಪ್ರವೃತ್ತಿಯ ಬಗ್ಗೆ ಎಚ್ಚರಿಕೆ ನೀಡಬೇಕಾಗಿದೆ.

ಆದರೆ ಹೊರ ಊರಿನಲ್ಲಿರುವವನು ತನ್ನ ಕುಟುಂಬದೊಂದಿಗೆ ತನ್ನ ಫಿತ್ರ್ ಝಕಾತನ್ನು ನೀಡಬೇಕೆಂದು ಹೇಳುವುದು ಇದರಲ್ಲಿ ಒಳಪಡುವುದಿಲ್ಲ. ನಾವಿಲ್ಲಿ ಹೇಳುತ್ತಿರುವುದು ಒಂದೂರಿನ ಫಿತ್ರ್ ಝಕಾತನ್ನು ಇನ್ನೊಂದೂರಿಗೆ ಸಾಗಿಸುವವರ ಬಗ್ಗೆ. ಮೇಲೆ ಹೇಳಿದ ಎಚ್ಚರಿಕೆಗಳು ಇವರಿಗೆ ಮಾತ್ರ ಅನ್ವಯಿಸುತ್ತದೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

# ಒಳಪುಟಗಳಲ್ಲಿ


| م | العنوان | الصفحة |
|---|---|---|
| 1 | ಫಿತ್ರ್ ಝುಕಾತ್ ಎಂದರೇನು? | 1 |
| 2 | ಫಿತ್ರ್ ಝುಕಾತಿನ ವಿಧಿಗಳು | 3 |
| 3 | ಫಿತ್ರ್ ಝುಕಾತನ್ನು ಧರ್ಮ ನಿಯಮವನ್ನಾಗಿ ಮಾಡಿರುವುದರ ಹಿಂದಿರುವ ಯುಕ್ತಿ | 4 |
| 4 | ಫಿತ್ರ್ ಝುಕಾತ್ ಯಾರಿಗೆಲ್ಲ ಕಡ್ಡಾಯ? | 5 |
| 5 | ಫಿತ್ರ್ ಝುಕಾತ್ ಆಗಿ ಏನೆಲ್ಲ ನೀಡಬಹುದು? | 7 |
| 6 | ಫಿತ್ರ್ ಝುಕಾತ್ ಎಷ್ಟು ನೀಡಬೇಕು? | 11 |
| 7 | ಫಿತ್ರ್ ಝುಕಾತ್ ಯಾವಾಗ ನೀಡಬೇಕು? | 12 |
| 8 | ಫಿತ್ರ್ ಝುಕಾತನ್ನು ಯಾರಿಗೆ ನೀಡಬೇಕು? | 14 |
| 9 | ಫಿತ್ರ್ ಝುಕಾತ್ ಆಗಿ ಹಣವನ್ನು ನೀಡಬಹುದೇ? | 16 |
| 10 | ಫಿತ್ರ್ ಝುಕಾತನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗಾಯಿಸಬಹುದೇ? | 17 |

IslamHouse.com